All India Radio: Bangalore
National Bulletin In Kannada
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
02.12.2025  7.35 a.m.
<><><*><><<>

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ, ಶ್ರೀಲಂಕಾ ಅಧ್ಯಕ್ಷರ ನಡುವೆ ದೂರವಾಣಿ ಸಂಭಾಷಣೆ; ಎಲ್ಲಾ ರೀತಿಯ ಸಹಕಾರ ನೀಡಲು ಭರವಸೆ

೨. ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಚುನಾವಣಾ ಸಹಾಯ ಸಂಸ್ಥೆಯ ಅಧ್ಯಕ್ಷತೆ ವಹಿಸಲು ಭಾರತಕ್ಕೆ ಮೊದಲ ಬಾರಿಗೆ ಆಹ್ವಾನ

೩. ಭಾರತದಲ್ಲಿ ಬಳಸಲಾಗುವ ಎಲ್ಲಾ ಮೊಬೈಲ್ ಫೋನ್‌ಗಳಲ್ಲಿ ಸಂಚಾರ್ ಸಾಥಿ ಆಪ್ ಅಳವಡಿಸಲು ಕೇಂದ್ರ ಸರ್ಕಾರ ನಿರ್ದೇಶನ

೪. ವಾರಣಾಸಿಯಲ್ಲಿಂದು ನಾಲ್ಕನೇ ಆವೃತ್ತಿಯ ಕಾಶಿ ತಮಿಳು ಸಂಗಮಮ್‌ಗೆ ಚಾಲನೆ; ಉತ್ತರ - ದಕ್ಷಿಣ ಸಂಬಂಧ ಬಲವರ್ಧನೆಯ ಗುರಿ

೫. ಎಫ್‌ಐಎಸ್ ಕಿರಿಯರ ಮಹಿಳಾ ಹಾಕಿ ವಿಶ್ವಕಪ್; ನಮಿಬಿಯಾ ವಿರುದ್ಧ ಭಾರತಕ್ಕೆ ಬೃಹತ್ ಗೆಲುವು

<><><*><><<>

ಪ್ರಧಾನಿ ನರೇಂದ್ರ ಮೋದಿ ನಿನ್ನೆ ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿ, ಸಂಕಷ್ಟದಲ್ಲಿರುವ ಜನರಿಗೆ ರಕ್ಷಣೆ ಮತ್ತು ಪರಿಹಾರ ಒದಗಿಸುವಲ್ಲಿ ಸಾಗರ್ ಬಂಧು ಕಾರ್ಯಾಚರಣೆಯಡಿಯಲ್ಲಿ ಶ್ರೀಲಂಕಾಕ್ಕೆ ಭಾರತದ ನಿರಂತರ ಬೆಂಬಲವನ್ನು ಭರವಸೆ ನೀಡಿದರು. ಮಹಾಸಾಗರ್ ಉಪಕ್ರಮಕ್ಕೆ ಹೊಂದಿಕೆಯಾಗಿ ಶ್ರೀಲಂಕಾ ಪುನರ್ವಸತಿ ಪ್ರಯತ್ನಗಳನ್ನು ಕೈಗೊಳ್ಳುವ, ಸಾರ್ವಜನಿಕ ಸೇವೆಗಳನ್ನು ಪುನರಾರಂಭಿಸುವ ಮತ್ತು ಪೀಡಿತ ಪ್ರದೇಶಗಳಲ್ಲಿ ಜೀವನೋಪಾಯವನ್ನು ಪುನಃಸ್ಥಾಪಿಸುವತ್ತ ಕೆಲಸ ಮಾಡುವ ಸಮಯದಲ್ಲಿ ಭಾರತ ಮುಂಬರುವ ದಿನಗಳಲ್ಲಿ ಅಗತ್ಯವಿರುವ ಎಲ್ಲಾ ಸಹಾಯವನ್ನು ನೀಡುವುದನ್ನು ಮುಂದುವರಿಸುತ್ತದೆ ಎಂದು ಪ್ರಧಾನಿ ಭರವಸೆ ನೀಡಿದರು. ವಿಪತ್ತಿನ ಹಿನ್ನೆಲೆಯಲ್ಲಿ ಭಾರತದ ಸಹಾಯಕ್ಕಾಗಿ ಅಧ್ಯಕ್ಷ ದಿಸ್ಸಾನಾಯಕೆ ಅವರು ಕೃತಜ್ಞತೆ ವ್ಯಕ್ತಪಡಿಸಿ, ರಕ್ಷಣಾ ತಂಡಗಳು ಮತ್ತು ಪರಿಹಾರ ಸಾಮಗ್ರಿಗಳ ತ್ವರಿತ ನಿಯೋಜನೆಯನ್ನು ಶ್ಲಾಘಿಸಿದರು. ಭಾರತದ ಸಕಾಲಿಕ ಮತ್ತು ಪರಿಣಾಮಕಾರಿ ಪ್ರಯತ್ನಗಳಿಗಾಗಿ ಮೆಚ್ಚುಗೆ

ವ್ಯಕ್ತಪಡಿಸಿದರು. ದಿತ್ವಾ ಚಂಡಮಾರುತದ ಹಿನ್ನೆಲೆಯಲ್ಲಿ ಶ್ರೀಲಂಕಾದಲ್ಲಿ ಸಂಭವಿಸಿದ ಜೀವಹಾನಿ ಮತ್ತು ವ್ಯಾಪಕ ವಿನಾಶದ ಬಗ್ಗೆ ಪ್ರಧಾನಿಯವರು ಸಂತಾಪ ವ್ಯಕ್ತಪಡಿಸಿದರು. ಈ ಸಮಯದಲ್ಲಿ ಭಾರತದ ಜನರು ಶ್ರೀಲಂಕಾದ ಜನರೊಂದಿಗೆ ದೃಢವಾದ ಬೆಂಬಲದೊಂದಿಗೆ ನಿಂತಿದ್ದಾರೆ ಎಂದು ತಿಳಿಸಿದರು.

<>><><*><><<>

ದಿತ್ವಾ ಚಂಡಮಾರುತದ ಪರಿಣಾಮದಿಂದ ಶ್ರೀಲಂಕಾದಲ್ಲಿ ಉಂಟಾಗಿರುವ ಭಾರಿ ಪ್ರವಾಹ ಮತ್ತು ಭೂಕುಸಿತದಿಂದಾಗಿ ಅಪಾರ ಪ್ರಮಾಣದ ಜೀವ ಹಾಗೂ ಆಸ್ತಿ ಹಾನಿ ಸಂಭವಿಸಿದೆ. ೩೯೦ ಜನ ಮೃತಪಟ್ಟಿದ್ದು, ೩೫೨ ಜನರು ಇನ್ನೂ ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಹೆಚ್ಚಿನ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಸಂಪರ್ಕ ಸುಧಾರಿಸುತ್ತಿದ್ದಂತೆ ಆ ಜಿಲ್ಲೆಗಳಲ್ಲಿ ರಕ್ಷಣಾ ಮತ್ತು ಪರಿಹಾರ ಕಾರ್ಯ ಮುಂದುವರೆದಿವೆ.  ಆಪರೇಷನ್ ಸಾಗರ್ ಬಂಧು ಅಡಿಯಲ್ಲಿ, ಭಾರತವು ವೈದ್ಯಕೀಯ, ರಕ್ಷಣಾ ಮತ್ತು ಸರಕು ಬೆಂಬಲವನ್ನು ವಿಸ್ತರಿಸಿದೆ. ಶ್ರೀಲಂಕಾಗೆ ಮೊದಲು ಸ್ಪಂದಿಸಿದ ಭಾರತ, ಸಿ -೧೩೦ ಜೆ ವಿಮಾನವು ಐಎಎಫ್ ವೈದ್ಯಕೀಯ ತಂಡದೊಂದಿಗೆ ಬಿಎಚ್ಐಎಚ್ಎಂ ಮಾಡ್ಯುಲರ್ ಟ್ರಾಮಾ ಕ್ಯೂಬ್ಸ್ ಸೇರಿದಂತೆ ಸುಮಾರು ೧೦ ಟನ್ ವೈದ್ಯಕೀಯ ಸರಬರಾಜುಗಳನ್ನು ಒದಗಿಸಿದೆ.  ಏತನ್ಮಧ್ಯೆ, ಐಎನ್ಎಸ್ ಸುಕನ್ಯಾ ಪೂರ್ವ ಪ್ರಾಂತ್ಯದ ತ್ರಿಕೋಮಲಿ ಬಂದರಿಗೆ ಆಗಮಿಸಿ, ತಕ್ಷಣದ ವಿತರಣೆಗಾಗಿ ೧೨ ಟನ್ ಅಗತ್ಯ ಪರಿಹಾರ ಸಾಮಗ್ರಿಗಳನ್ನು ತಲುಪಿಸಿದೆ.

<>><><*><><<>

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಚುನಾವಣಾ ಸಹಾಯ ಸಂಸ್ಥೆ - ಐಡಿಇಎ ಅಧ್ಯಕ್ಷತೆ ವಹಿಸಲು ಭಾರತವನ್ನು ಇದೇ ಮೊದಲ ಬಾರಿಗೆ ಆಹ್ವಾನಿಸಲಾಗಿದೆ. ಭಾರತದ ಪರವಾಗಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ನಾಳೆ ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ಅಂತಾರಾಷ್ಟ್ರೀಯ ಐಡಿಇಎಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದ್ದಾರೆ. ಭಾರತದ ಅಧ್ಯಕ್ಷತೆಯ ಬಗ್ಗೆ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಭಾರತದಲ್ಲಿ ಮುಕ್ತ, ನ್ಯಾಯಯುತ ಮತ್ತು ಪಾರದರ್ಶಕ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸುವುದನ್ನು ಇಂದು ಇಡೀ ಜಗತ್ತು ತಿಳಿದಿದೆ. ಇದು ಭಾರತದ ಎಲ್ಲಾ ನಾಗರಿಕರು ಮತ್ತು ಚುನಾವಣಾ ಕಾರ್ಯಕರ್ತರಿಗೆ ಹೆಮ್ಮೆಯ ಕ್ಷಣವಾಗಿದೆ ಎಂದು ಹೇಳಿದರು.

<>><><*><><<>

ಮೊಬೈಲ್ ಹ್ಯಾಂಡ್‌ಸೆಟ್‌ಗಳ ನೈಜತೆಯನ್ನು ಪರಿಶೀಲಿಸಲು ಮೊಬೈಲ್ ಸೆಟ್‌ಗಳಲ್ಲಿ ಸಂಚಾರ್ ಸಾಥಿ ಆಪ್ ಅನ್ನು ಮೊದಲೇ ಸ್ಥಾಪಿಸಲು ಇನ್‌ಸ್ಟಾಲ್ ಮಾಡಲು ನಿರ್ದೇಶನಗಳನ್ನು ನೀಡಿದೆ.

ಭಾರತದಲ್ಲಿ ಬಳಕೆಗಾಗಿ ತಯಾರಿಸಲಾದ ಅಥವಾ ಆಮದು ಮಾಡಿಕೊಳ್ಳುವ ಎಲ್ಲಾ ಮೊಬೈಲ್ ಹ್ಯಾಂಡ್‌ಸೆಟ್‌ಗಳಲ್ಲಿ ಸಂಚಾರ್ ಸಾಥಿ ಮೊಬೈಲ್ ಅಪ್ಲಿಕೇಶನ್ ಮೊದಲೇ ಸ್ಥಾಪಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ದೂರಸಂಪರ್ಕ ಇಲಾಖೆ ಮೊಬೈಲ್ ಹ್ಯಾಂಡ್‌ಸೆಟ್‌ಗಳ ತಯಾರಕರು ಮತ್ತು ಆಮದುದಾರರಿಗೆ ನಿರ್ದೇಶನ ನೀಡಿದೆ. ಮೊದಲೇ ಆಪ್ ಇನ್‌ಸ್ಟಾಲ್ ಮಾಡಬೇಕು. ಇದು ಗ್ರಾಹಕರಿಗೆ ಸುಲಭವಾಗಿ ಬಳಕೆಗೆ ಸಿಗುವಂತಿರಬೇಕು ಎಂದು ಸೂಚಿಸಿದೆ. ಯಾವುದೇ ಕಾರಣಕ್ಕೂ ಅಪ್ಲಿಕೇಷನ್ ಕ್ರಿಯಾತ್ಮಕತೆಯನ್ನು ನಿಷ್ಕ್ರಿಯಗೊಳಿಸಬಾರದು ಅಥವಾ ನಿರ್ಬಂಧಿಸಬಾರದು ಎಂದು ಸೂಚಿಸಿದೆ. ಮೊಬೈಲ್ ಹ್ಯಾಂಡ್‌ಸೆಟ್‌ಗಳ ತಯಾರಕರು ಮತ್ತು ಆಮದುದಾರರು ಈಗಾಗಲೇ ತಯಾರಿಸಲಾದ ಮತ್ತು ಭಾರತದಲ್ಲಿ ಮಾರಾಟ ಮಾರ್ಗಗಳಲ್ಲಿರುವ ಸಾಧನಗಳಿಗೆ ಸಾಫ್ಟ್‌ವೇರ್ ನವೀಕರಣಗಳ ಮೂಲಕ ಅಪ್ಲಿಕೇಶನ್ ಗಳನ್ನು ಇನ್‌ಸ್ಟಾಲ್ ಮಾಡಲು ನಿರ್ದೇಶನ ನೀಡಿದೆ. ಇಲಾಖೆಯು ಮೊಬೈಲ್ ತಯಾರಕರನ್ನು ೯೦ ದಿನಗಳಲ್ಲಿ ಅನುಷ್ಠಾನವನ್ನು ಪೂರ್ಣಗೊಳಿಸಲು ಮತ್ತು ೧೨೦ ದಿನಗಳಲ್ಲಿ ವರದಿಯನ್ನು ಸಲ್ಲಿಸಲು ಸೂಚಿಸಿದೆ.

<>><><*><><<>

ಕಾಶಿ-ತಮಿಳು ಸಂಗಮಮ್‌ನ ನಾಲ್ಕನೇ ಆವೃತ್ತಿಯು ಇಂದು ಉತ್ತರ ಪ್ರದೇಶದ ವಾರಣಾಸಿಯಲ್ಲಿ ಆರಂಭವಾಗಲಿದೆ. ಉತ್ತರ ಮತ್ತು ದಕ್ಷಿಣದ ನಡುವಿನ ಸಂಬಂಧಗಳನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ಈ ಕಾರ್ಯಕ್ರಮವನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಜಂಟಿಯಾಗಿ ಉದ್ಘಾಟಿಸಲಿದ್ದಾರೆ. ಇಂದು ಸಂಜೆ ನಮೋ ಘಾಟ್‌ನಲ್ಲಿ ಅದ್ಧೂರಿ ಉದ್ಘಾಟನಾ ಸಮಾರಂಭ ನಡೆಯಲಿದೆ. "ತಮಿಳು ಕಲಿಯೋಣ ಎಂಬರ್ಥದ ತಮಿಳು ಕಾರ್ಕಳಂ" ಕಾಶಿ ತಮಿಳು ಸಂಗಮಮ್ ೪.೦ ಯ ಧ್ಯೇಯವಾಕ್ಯವಾಗಿದೆ. ಈ ಆವೃತ್ತಿಯು ಎಲ್ಲಾ ಭಾರತೀಯ ಭಾಷೆಗಳು, ಭಾರತೀಯ ಭಾಷಾ ಕುಟುಂಬಕ್ಕೆ ಸೇರಿವೆ ಎಂಬ ದೃಷ್ಟಿಕೋನಕ್ಕೆ ಅನುಗುಣವಾಗಿದೆ. ಉದ್ಘಾಟನಾ ಸಮಾರಂಭದಲ್ಲಿ, ಕಾಶಿ ಮತ್ತು ತಮಿಳುನಾಡಿನ ಕಲಾವಿದರು ವೇದಿಕೆಯಲ್ಲಿ ವೈವಿಧ್ಯಮಯ ಭಾರತೀಯ ಸಂಸ್ಕೃತಿಯ ಅದ್ಭುತ ಸಂಗಮವನ್ನು ಪ್ರದರ್ಶಿಸಲಿದ್ದಾರೆ. ವಿದ್ಯಾರ್ಥಿಗಳು, ಶಿಕ್ಷಕರು, ಬರಹಗಾರರು ಮತ್ತು ಮಾಧ್ಯಮ ವೃತ್ತಿಪರರು, ಕೃಷಿ ಮತ್ತು ಸಂಬಂಧಿತ ವಲಯಗಳ ಪಾಲುದಾರರು, ವೃತ್ತಿಪರರು ಮತ್ತು ಕುಶಲಕರ್ಮಿಗಳು, ಮಹಿಳೆಯರು ಮತ್ತು ಆಧ್ಯಾತ್ಮಿಕ ವಿದ್ವಾಂಸರು ಸೇರಿದಂತೆ ಏಳು ವಿಶಾಲ ವಿಭಾಗಗಳಿಗೆ ಸೇರಿದ ತಮಿಳುನಾಡಿನ ೧ ಸಾವಿರದ ೪೦೦ ಕ್ಕೂ ಹೆಚ್ಚು ಪ್ರತಿನಿಧಿಗಳು ಕಾಶಿಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

<>><><*><><<>

ಒಟ್ಟು ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಸಂಗ್ರಹವು ಶೇಕಡಾ ೦.೭ರಷ್ಟು ಹೆಚ್ಚಳವಾಗಿದೆ. ನವೆಂಬರ್ ೨೦೨೪ ಕ್ಕೆ ಹೋಲಿಸಿದರೆ ಈ ಬಾರಿ ೧.೭೦ ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ ಒಟ್ಟು ಜಿಎಸ್‌ಟಿ ಆದಾಯ ೧.೬೯ ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು. ಅಕ್ಟೋಬರ್‌ನಲ್ಲಿ ಕೇಂದ್ರ ಜಿಎಸ್‌ಟಿ ಸಂಗ್ರಹ ೩೪ ಸಾವಿರದ ೮೪೩ ಕೋಟಿ ರೂಪಾಯಿಗಳಷ್ಟಿತ್ತು ಮತ್ತು ರಾಜ್ಯ ಜಿಎಸ್‌ಟಿ ೪೨ ಸಾವಿರದ ೫೨೨ ಕೋಟಿ ರೂಪಾಯಿಗಳಷ್ಟಿತ್ತು. ಸಂಯೋಜಿತ ಐಜಿಎಸ್‌ಟಿ ಸಂಗ್ರಹವು ೯೨ ಸಾವಿರದ ೯೧೦ ರೂಪಾಯಿಗಳಷ್ಟಿದ್ದು, ಸೆಸ್ ನಾಲ್ಕು ಸಾವಿರದ ಆರು ಕೋಟಿಗಳಷ್ಟಿದೆ.

<>><><*><><<>

ದೆಹಲಿ ಕಾರು ಸ್ಫೋಟ ಪ್ರಕರಣದ ತನಿಖೆಯ ಭಾಗವಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ-ಎನ್‌ಐಎ, ಜಮ್ಮು ಮತ್ತು ಕಾಶ್ಮೀರ ಮತ್ತು ಉತ್ತರ ಪ್ರದೇಶದ ಹಲವಾರು ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿದೆ. ನಿನ್ನೆ ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್, ಕುಲ್ಗಾಮ್, ಪುಲ್ವಾಮಾ ಮತ್ತು ಅವಂತಿಪೋರಾ ಜಿಲ್ಲೆಗಳಲ್ಲಿ ಒಟ್ಟು ಎಂಟು ಸ್ಥಳಗಳಲ್ಲಿ ಮತ್ತು ಲಕ್ನೋದ ಒಂದು ಸ್ಥಳದಲ್ಲಿ ಶೋಧ ನಡೆಸಲಾಗಿದೆ ಎಂದು ಎನ್‌ಐಎ ತಿಳಿಸಿದೆ. ಎರಡೂ ರಾಜ್ಯಗಳಲ್ಲಿನ ಹಲವಾರು ಆರೋಪಿಗಳು ಮತ್ತು ಶಂಕಿತರ ಸ್ಥಳಗಳಲ್ಲಿ ನಡೆಸಿದ ಶೋಧದ ಸಮಯದಲ್ಲಿ ವಿವಿಧ ಡಿಜಿಟಲ್ ಸಾಧನಗಳು ಮತ್ತು ಇತರ ಅಪರಾಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಂಸ್ಥೆ ತಿಳಿಸಿದೆ. ಕಳೆದ ತಿಂಗಳ ಆರಂಭದಲ್ಲಿ, ಎನ್‌ಐಎ ಪ್ರಮುಖ ಆರೋಪಿಗಳಾದ ಡಾ.ಮುಜಮ್ಮಿಲ್ ಶಕೀಲ್ ಗನಿ ಮತ್ತು ಡಾ.ಶಾಹೀನ್ ಸಯೀದ್ ಅವರ ಅಲ್ ಫಲಾಹ್ ವಿಶ್ವವಿದ್ಯಾಲಯ ಸಂಕೀರ್ಣ ಮತ್ತು ಹರಿಯಾಣದ ಫರಿದಾಬಾದ್‌ನ ಇತರ ಸ್ಥಳಗಳಲ್ಲಿಯೂ ಶೋಧ ನಡೆಸಿತ್ತು. ಭಯೋತ್ಪಾದನಾ ನಿಗ್ರಹ ಸಂಸ್ಥೆಯು ಈ ಪ್ರಕರಣದಲ್ಲಿ ಇದುವರೆಗೆ ಏಳು ಪ್ರಮುಖ ಆರೋಪಿಗಳನ್ನು ಬಂಧಿಸಿದೆ. ದೆಹಲಿ ಸ್ಫೋಟದಲ್ಲಿ ಭಾಗಿಯಾಗಿರುವ ಭಯೋತ್ಪಾದಕ ಘಟಕದ ಪ್ರತಿಯೊಬ್ಬ ಸದಸ್ಯರನ್ನು ಪತ್ತೆಹಚ್ಚಲು ಮತ್ತು ಬಂಧಿಸಲು ವಿವಿಧ ರಾಜ್ಯ ಪೊಲೀಸ್ ಪಡೆಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸಲಾಗಿದೆ ಎಂದು ಎನ್‌ಐಎ ತಿಳಿಸಿದೆ.

<>><><*><><<>

ಚಿಲಿಯ ಸ್ಯಾಂಟಿಯಾಗೊದಲ್ಲಿ ನಡೆಯುತ್ತಿರುವ ಎಫ್‌ಐಎಚ್ ಜೂನಿಯರ್ ಮಹಿಳಾ ಹಾಕಿ ವಿಶ್ವಕಪ್‌ನಲ್ಲಿ ಭಾರತೀಯ ಕಿರಿಯರ ತಂಡ, ನಮೀಬಿಯಾ ವಿರುದ್ಧ ೧೩-೦ ಅಂತರದ ಗೆಲುವಿನೊಂದಿಗೆ ಉತ್ತಮ ಆರಂಭ ಕಂಡಿದ್ದಾರೆ. ಈ ಗೆಲುವಿನೊಂದಿಗೆ ಭಾರತ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಹಿನಾ ಬಾನೋ ಮತ್ತು ಕನಿಕಾ ಸಿವಾಚ್ ಹ್ಯಾಟ್ರಿಕ್ ಗಳಿಸಿದರೆ, ಸಾಕ್ಷಿ ರಾಣಾ

ಎರಡು ಗೋಲು ಗಳಿಸಿದರು. ಬಿನಿಮಾ ಧನ್, ಸೋನಮ್, ಸಾಕ್ಷಿ ಶುಕ್ಲಾ, ಇಶಿಕಾ ಮತ್ತು ಮನೀಷಾ ತಲಾ ಒಂದು ಗೋಲು ಗಳಿಸಿದರು. ಜ್ಯೋತಿ ಸಿಂಗ್ ನೇತೃತ್ವದ ತಂಡವು ಜರ್ಮನಿ, ಐರ್ಲೆಂಡ್ ಮತ್ತು ನಮೀಬಿಯಾ ಜೊತೆಗೆ ಸಿ ಗುಂಪಿನಲ್ಲಿ ಸ್ಥಾನ ಪಡೆದಿದೆ.  ಏತನ್ಮಧ್ಯೆ, ನಿನ್ನೆ ನಡೆದ ಗುಂಪು ಹಂತದ ಮೊದಲ ಪಂದ್ಯದಲ್ಲಿ ಜರ್ಮನಿ ಐರ್ಲೆಂಡ್ ವಿರುದ್ಧ ೬-೧ ಅಂತರದ ಗೆಲುವು ದಾಖಲಿಸಿತು. ಭಾರತ ನಾಳೆ ಜರ್ಮನಿಯನ್ನು ಎದುರಿಸಲಿದೆ, ನಂತರ ಶುಕ್ರವಾರ ತಮ್ಮ ಅಂತಿಮ ಗುಂಪು ಹಂತದ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಲಿದೆ. ಪುರುಷರ ಹಾಕಿಯಲ್ಲಿ, ಇಂದು ತಮಿಳುನಾಡಿನ ಮಧುರೈನಲ್ಲಿ ನಡೆಯಲಿರುವ ಎಫ್ಐಎಚ್ ಕಿರಿಯರ ಪುರುಷರ ವಿಶ್ವಕಪ್‌ನಲ್ಲಿ ನಾಕೌಟ್ ಹಂತಕ್ಕೆ ಮುಂಚಿತವಾಗಿ ಅಂತಿಮ ಗುಂಪು ಹಂತದ ಮುಖಾಮುಖಿಯಲ್ಲಿ ಭಾರತ ಸ್ವಿಟ್ಜರ್ಲೆಂಡ್ ವಿರುದ್ಧ ಆಡಲಿದೆ. ಪಂದ್ಯವು ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ><><<>